72

132

ಪೊಲೀಸ್ ಇಲಾಖೆ.

———

ತಾರೀಖು 26ನೇ ಜನವರೀ 1877.

ಬೆಂಗಳೂರು ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರ್ ಶ್ರೀನಿವಾಸಯ್ಯಂಗಾರಿಗೆ ಸ್ರ 1877ನೇ ಇಸವಿ ಜನವರೀ 22ನೇ ಮುಕ್ತಂ ಲಗಾಯತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

———

ಸರ್ಕ್ಯುಲರ್ ನಂಬರ್ 2205—106.

ತಾರೀಖು 30ನೇ ಜನವರೀ 1877ನೇ ಇಸವಿ.

ಡಿಸ್ಟ್ರಿಕ್ಟ್ ಜೆಪ್ಯುಟಿ ಕಮ್ಮಿಷನರ್‌ಗಳಿಗೆ ಮತ್ತು ದರೋಬಸ್ತು ಮಾಜಿಸ್ಟ್ರೇಟ ವ ಪೊಲೀಸ್ ಆಫಿಸರ್‌ಗಳಿಗೆ.

ಪೊಲೀಸ್‌ನವರು ಮಾಜಿಸ್ಟ್ರೇಟ್‌ಗಳಿಗೆ ಮಾಡತಕ್ಕ ತಕ್ಸೀರ್ ರಿಪೋರ್ಟುಬಗ್ಯೆ ವಿಧ್ಯಡಿಸಲ್ಪಟ್ಟ ಕಾರ್ನೂ.

ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 114ನೇ ಸೆಕ್ಷನ್‌ನಲ್ಲಿ ಯಿರುವ, "ಅಧಿಕಾರವುಳ್ಳ ಮಾಜಿಸ್ಟ್ರೇಟು" ಎಂಬುಮಾತು (ಬಂದು ಮೊಕದ್ದಮೆಯ ಸಂಗತಿ ತಿಳಿಯಬಂದ ಮೇಲೆ) ಸದರೀ ತಕ್ಸೀರನ್ನು ವಿಚಾರಣೆ ಮಾಡಲಿಕ್ಕೆ ಯಾವ ಮಾಜಿಸ್ಟ್ರೇಟರು ಅರ್ಹರೆಂದು ಪರ್ಯಾಲೋಚಿಸಬೇಕೆಂತಲೂ, ಬಳಿಕ ಆ ಮಾಜಿಸ್ಟ್ರೇಟರಿಗೇನೇ ಆ ಸಂಗತಿಯನ್ನು ರಿಪೋರ್ಟು ಮಾಡತಕ್ಕದ್ದೆಂತಲೂ, ಪೊಲೀಸ್‌ನವರು ಭಾವಿಸುವಂತೆ ಅವರನ್ನು ಭ್ರಾಂತಿಗೊಳಿಸುತ್ತದೆಂದು ತಿಳಿಯಬರುತ್ತೆ.

ಇದರ ಫಲವೇನಾಗುತ್ತೆಂದರೆ, ಪೊಲೀಸ್‌ನವರು ತಕ್ಸೀರನ್ನು ಹಜಂಮಾಡುವದಕ್ಕೆ ಅನುಕೂಲ್ಯ ವುಂಟಾಗುತ್ತದೆ ಯಾತಕ್ಕಂದರೆ, ಅಂತಾ ತಕ್ಸೀರ್‌ಗಳನ್ನು ಕುರಿತು ಸಾಮಾನ್ಯವಾಗಿ ವರ್ತಮಾನ ಕೇಳುವ (ಪರಂತು ಆ ತಕ್ಸೀರ್‌ಗಳು ಯಾವ ಮಾಜಿಸ್ಟ್ರೇಟರಿಗಾದರೂ, ಪೋಲಿಸ್‌ನವರಿಂದ ರಿಪೋರ್ಟು ಮಾಡಲ್ಪಟ್ಟಿತೆ, ಯೆಂದು ತಿಳಿದುಕ್ಕೊಳ್ಳುವದಕ್ಕೆ ರಜಾ ಯಿಲ್ಲದ) ಸ್ಥಳದ ತಾಲ್ಲೂಕು ಮಾಜಿಸ್ಟ್ರೇಟುಗಳಿಗಾಗಲಿ, ದೂರದಲ್ಲಿರುವ ಸಬಜ್ ಪೊಲೀಸ್‌ನವರು ರಿಪೋರ್ಟು ಮಾಡುವ ಪರ್ಯಂತ ಅಂತಾ ತಕ್ಸೀರ್‌ಗಳು ನಡದದ್ದನ್ನು ಕುರಿತು ವರ್ತಮಾನ ಪಡೆಯುವದಕ್ಕೆ ರಜಾ ಯಿಲ್ಲದ ಹೈಯರ್ ಗ್ರೇಡ್ ಮಾಜಿಸ್ಟ್ರೇಟ್‌ಗಳಿಗಾಗಲಿ, ಆ ಸಂಗತಿಗಳು ಸಂಪೂರ್ಣವಾಗಿ ತಿಳಿಯದೇ ಹೋಗುತ್ತೆ.

ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ತಪ್ಪಿತದ ಬಾಬತು ಹೈಯರ್‌ಗ್ರೇಡ್ ಮಾಜಿಸ್ಟ್ರೇಟ್‌ಗಳಿಗೆ ಕಳುಹಿಸಲ್ಪಟ್ಟ ರಿಪೋರ್ಟುಗಳ ನಕಲ್‌ಗಳು ತಾಲ್ಲೂಕು ಮಾಜಿಸ್ಟ್ರೇಟ್‌ಗಳಿಗೆ ಸಹ ಜಾಹಿರಾತೀಬಗ್ಯೆ ಕಳುಹಿಸಲ್ಪಡುತ್ತವೆ, ಪರಂತು ಯಿದರಿಂದ ಜಾಸ್ತೀ ಬರವಣಿಗೆ ಸಂಭವಿಸುತ್ತದೆ.

2. ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 114ನೇ ಸೆಕ್ಷನ್ ಅರ್ಥ ಸಂದರ್ಭದದೆಸೆಯಿಂದ ವಿಶದವಾಗುವ ದೇನಂದರೆ—'ಅಧಿಕಾರ" ಎಂಬುಮಾತು ಅದರಲ್ಲಿ ಪ್ರಯೋಗಿಸಲ್ಪಟ್ಟಮೇರೆ "ಸ್ಥಳಾಧಿಕಾರ" ಎಂದು ಅರ್ಥವಾಗುತ್ತೆ, ಮತ್ತು ಮಾಜಿಸ್ಟ್ರೇಟರು, ತಮ್ಮ ಸರಹದ್ದಿನಲ್ಲಿ ಸಂಭವಿಸುವ ದರೋಬಸ್ತು ಕ್ರಿಮಿನಲ್ ಮೊಕದ್ದಮೆಗಳ ಸಂಗತಿಯನ್ನು ಪೊಲೀಸ್‌ನವರಿಂದ ಪಡೆಯಬೇಕಾದ್ದು ಮಾತ್ರವಲ್ಲದೆ, ರಿಪೋರ್ಟು ಮಾಡಲ್ಪಟ್ಟ ಮೊಕದ್ದಮೆಯನ್ನು ವಿಚಾರಣೆ ಮಾಡುವದಕ್ಕೆ ತಾವು ಅರ್ಹರೇಯೆಂಬ ಅಂಶವನ್ನು ತಾವೇ ನಿರ್ಣಯಿಸಿಕೊಳ್ಳಬೇಕೇಹೊರತು ಪೊಲೀಸ್‌ನವರಿಗೆ ನಿಮಿತ್ತವಿಲ್ಲ.

3. ಆದ್ದರಿಂದ ಇನ್ನು ಮೇಲೆ ಪೊಲೀಸ್‌ನವರು, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ, 114. 117, 124, 125, 127, 133, 415 ಈ ಸೆಕ್ಷನ್‌ಗಳನುಸರಿಸಿ ಮಾಡಲ್ಪಡುವ ದರೋಬಸ್ತು ರಿಪೋರ್ಟುಗಳನ್ನೂ 123ನೇ ಸೆಕ್ಷನ್ ಅನುಸರಿಸಿ ಅವರು ದಸ್ತಗಿರೀ ಮಾಡುವ ದರೋಬಸ್ತು ಆಸಾಮಿಗಳನ್ನೂ, ಡಿಸ್ಟ್ರಿಕ್ಟ್ ಯಾ ಸಬ್‌ಡಿವಿಜ್ ಮಾಜಿಸ್ಟ್ರೇಟ್‌ಗಳ ಹೆಡ್‌ಕ್ವಾರ್ಟರ್‌ಗಳಾದ ತಾಲ್ಲೂಕುಗಳು ಅಥವಾ ಸದರೀ ಆಫಿಸರ್‌ಗಳು ಹಾಜರ್ ಯಿರಬಹುದಾದ ಸ್ಥಳಗಳು ಹೊರತು ಮಿಕ್ಕ ಸ್ಥಳಗತಿಗಳಲ್ಲಿ ತಾಲ್ಲೂಕು ಮಾಜಿಸ್ಟ್ರುಟರಿಗೆ ಕಳುಹಿಸತಕ್ಕದ್ದು ಮೇಲ್ಕಂಡ ಅಂತಾಸಂಗತಿಗಳಲ್ಲಿ ರಿಪೋರ್ಟುಗಳನ್ನೂ, ದಸ್ತಗಿರಿಯಾದ ಆಸಾಮಿಗಳನ್ನೂ. ಡಿಸ್ಟ್ರಿಕ್ಟ್ ವ ಸಬ್ ಡಿವಿಜ್ ಮಾಜಿಸ್ಟ್ರೇಟ್‌ಗಳಿಗೆ ಕಳುಹಿಸತಕ್ಕದ್ದು.

4. ಸಬ್‌ಆರ್ಡಿನೇಟ್ ಮಾಜಿಸ್ಟ್ರೇಟರಿಂದ ವಿಚಾರಣೆಗೆ ಅರ್ಹವಾದ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಪೊಲೀಸ್‌ನವರಿಂದ ರಿಪೋರ್ಟು ಮುಂತಾದವುಗಳನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾಗಲಿ, ಸಬ್‌ಡಿವಿಜ್ ಮಾಜಿಸ್ಟ್ರೇಟರಾಗಲಿ ತೆಗದುಕ್ಕೊಂಡ ಪಕ್ಷಕ್ಕೆ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ 44ನೇ ಸೆಕ್ಷನ್ ಅನುಸರಿಸಿ ತಮ್ಮ ಯಖ್ತ್ಯಾರೀಮೇರೆ ಅಮಲ್ ನಡಿಸಬಹುದು.

5. ಒಬ್ಬ ತಾಲ್ಲೂಕು ಮಾಜಿಸ್ಟ್ರೇಟರಿಗೆ, ಪೊಲೀಸ್‌ನವರಿಂದ ತಪ್ಪಿತದ ರಿಪೋರ್ಟು ಮುಂತಾದವು ಬಂದ ಪಕ್ಷಕ್ಕೆ, ಮತ್ತು ವಿಚಾರಿಸುವಲ್ಲಿ ತಾನು ವಿಚಾರಣೆಮಾಡಲಿಕ್ಕೆ ಅಥವಾ ವಿಚಾರಣೆ ಬಗ್ಯೆ ಕಮ್ಮಿಟೆ ಮಾಡಲಿಕ್ಕೆ ಅರ್ಹನಲ್ಲದ ಮೊಕದ್ದಮೆಯೆಂಬದಾ

138

ತೃಪ್ತಿಕರವಾಗಿ ತಿಳಿಯಬಂದ ಪಕ್ಷಕ್ಕೆ, ಕ್ರಿಮಿನಲ್ ಪ್ರೊಸೀಡ್ಯೂರ್‌ಕೋಡ್ 45ನೇ ಸೆಕ್ಷರ್ಷನಲ್ಲಿ ಕಾಣಿಸಲ್ಪಟ್ಟ ರೀತಿಯಾಗಿ ಕೂಡ್ಲೆ ಅಮಲ್ ನಡಿಸತಕ್ಕದ್ದು ಹಾಗೆ ನಡಿಸುವಲ್ಲಿ ಆಗಿಂದಾಗ್ಗೆ ಬಂದ ಮೊಕದ್ದಮೆಯ ಳಗಣ ರಿಪೋರ್ಟುಗಳನ್ನು, ಮೊಕದ್ದಮೆಯನ್ನು ವಿಚಾರಣೆ ಮಾಡಲಿಕ್ಕೆ ಅರ್ಹರಾದ ಮಾಜಿಸ್ಟ್ರೇಟರಿಗೆ ಕಳುಹಿಸತಕ್ಕದ್ದು.

6. ಡಿಸ್ಟ್ರಿಕ್ಟು, ಡಿವೀರ್ಜ, ಯಾ ತಾಲ್ಲೂಕು ಮಾಜಿಸ್ಟ್ರೇಟುಗಳು ತಮ್ಮ ಹೆಡ್‌ಕ್ವಾರ್ಟರ್‌ಗಳಿಂದ ಗೈರ್‌ಹಾಜರ್ ಇದ್ದಪಕ್ಷಕ್ಕೆ ಕ್ರಿಮಿನಲ್ ಅಪರಾಧಗಳ ಬಾಬತು ಪೊಲೀಸ್ ರಿಪೋರ್ಟುಗಳನ್ನು ತೆಗದುಕ್ಕೊಳ್ಳಲಿಕ್ಕೂ, ಸಾವಕಾಶ ಮಾಡದೆ ಜರೂರಿದ್ದ ಪ್ರಕಾರ ಅವುಗಳನ್ನು ವಿಚಾರಣೆ ಮಾಡಲಿಕ್ಕೂ, ತಮ್ಮ ಸಬಾರ್ಡಿನೇಟ್ ಮಾಜಿಸ್ಟ್ರೇಟ್ ಆಫಿಸರ್‌ಗಳ ಪೈಕೀ ಒಬ್ಬರನ್ನು ನಿಯಮಿಸತಕ್ಕದ್ದು.

7. ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ಡಿನ 132ನೇ ಸೆಕ್ಷರ್ಷ ಅನುಸರಿಸಿ ಮಾಡಲ್ಪಡುವ ದಸ್ತಗಿರಿಗಳ ಬಾಬತು ರಿಪೋರ್ಟುಗಳು, ಡಿಸ್ಟ್ರಿಕ್ಟು ಯಾ ಸಬ್‌ಡಿವೀರ್ಜ ಮಾಜಿಸ್ಟ್ರೇಟರಿಗೆ ಪರಭಾರೆ ಕಳುಹಿಸತಕ್ಕದ್ದು, ಅವರ ಹೆಡ್‌ಕ್ವಾರ್ಟರು, ಬಂದು ಬೀಟಿನ ಫಾಸಲೆಗಿಂತ ಹೆಚ್ಚಾಗಿ ಇದ್ದಪಕ್ಷಕ್ಕೆ ಅಂಚೇ ಮೂಲಕವಾಗಿ ರವಾನಿಸತಕ್ಕದ್ದು.

8. ಆದ್ದರಿಂದ, ತಕಸೀರ್‌ಗಳ ಬಾಬತು, ಮತ್ತು ಆ ವಿಷಯದಲ್ಲಿ ನಡಿಸಲ್ಪಟ್ಟ ಕಾರ್ಯ ಭಾಗದ ಬಾಬತು ರಿಪೋರ್ಟುಗಳನ್ನು ಪೊಲೀಸ್ ಸ್ಟೇಷರ್ಷಗಳ ಮುಖ್ಯರು ಯಾರಿಗೆ ಕೂಡ್ಲೆ ಕಳುಹಿಸಬೇಕೋ ಅಂತಾ ಆಫಿಸರ್‌ಗಳು ಯಾರಂದರೆ.

I. ಸ್ಥಳಾಧಿಕಾರವುಳ್ಳ ಮಾಜಿಸ್ಟ್ರೇಟರು—ಫಿರ್ಯಾದಿಯ ರುಜು ಆಗಿರುವ ಫಿರ್ಯಾದ್ ಅರ್ಜಿಯು, ಕೃತ್ಯ ನಡೆದ ಸ್ಥಳಕ್ಕೆ ಪೊಲೀಸ್ ಆಫಿಸರ್ ಹೋಗಿ ಸೇರುವದಕ್ಕೆ ಮುಂದಾಗಿ ಮುದ್ದಾಂದ್ವಾರಾ, ಪ್ರಥಮ ಸಂಗತಿ ರಿಪೋರ್ಟು ಸಹಿತ ಸದರೀ ಮಾಜಿಸ್ಟ್ರೇಟರಿಗೆ ಕಳುಹಿಸಲ್ಪಡತಕ್ಕದ್ದು, ಮತ್ತು ಪ್ರಬಲ ಮೊಕದ್ದಮೆಗಳಲ್ಲಿ ತಾವು ಯಾವಾಗ ತಾಪೇದಾರ್‌ರಾಗಿರುತ್ತಾರೋ ಅಂತಾ ಡಿಸ್ಟ್ರಿಕ್ಟ್ ಯಾ ಸಬ್ ಡಿವೀರ್ಜ ಮಾಜಿಸ್ಟ್ರೇಟರಿಗೆ ಎಕ್ಸ್‌ಪ್ರೆಸ್ ದ್ವಾರಾ ಆ ರಿಪೋರ್ಟನ್ನು ರವಾನಿಸತಕ್ಕದ್ದು.

II. ತಾಲ್ಲೂಕು ಯಾ ಡಿವೀರ್ಜ ಇನ್‌ಸ್ಪೆಕ್ಟರು, ಭಾರೀ ಮೊಕದ್ದಮೆಗಳಲ್ಲಿ ಬದಸ್ತೂರ್ ಪಾಣಾ ಟಪ್ಪಾಲ್ ಎಕ್ಸ್‌ಪ್ರೆಸ್ ದ್ವಾರಾ ತಮಗೆ ಬರುವ ರಿಪೋರ್ಟನ್ನು ಪೊಲೀಸ್ ಅಸಿಸ್ಟೆಂಟರಿಗಾಗಲಿ, ಡಿಸ್ಟ್ರಿಕ್ಟು ಪೊಲೀಸ್ ಆಫಿಸರಿಗಾಗಲಿ, ಯಾರು ಅತ್ಯಂತ ಸಮೀಪದಲ್ಲಿರುತ್ತಾರೋ ಅವರಿಗೆ ರವಾನಿಸತಕ್ಕದ್ದು.

ಮು. ವಿ. ಕೃತ್ಯ ನಡದ್ದಾಗಿ ರಿಪೋರ್ಟಾದ ಸ್ಥಳದಲ್ಲಿ ಇನ್‌ಸ್ಪೆಕ್ಟರು ಹಾಜರು ಇದ್ದಪಕ್ಷಕ್ಕೆ ಸದರೀ ಕೆಲಸವನ್ನು ಖುದ್ದು ನೆರವೇರಿಸತಕ್ಕದ್ದು.

9. ರಿಪೋರ್ಟು ಮಾಡಲ್ಪಡುವ ದಿನದಲ್ಲಿ ಪೊಲೀಸನವರಿಂದಾಗಲಿ, ಮಾಜಿಸ್ಟ್ರೇಟರಿಂದಾಗಲಿ, ವ್ಯವಹರಣೆ ನಡಿಸಬಹುದಾದ ದಿನದಿನಕ್ಕೂ ರಿಪೋರ್ಟು ಮಾಡಲ್ಪಟ್ಟ ಮತ್ತು ವ್ಯವಸ್ಥೆ ಹೊಂದದೆ ಇರುವ ದರೋಜಸ್ತು ಮೊಕದ್ದಮೆಗಳ ತಪಸೀಲ್‌ಗಳು ಹೆಡ್ ಕ್ವಾರ್ಟರಿಗೆ ಕಳುಹಿಸೋಣಾದ ಪೊಲೀಸ್ ಸ್ಟೇಷರ್ಷ ಡೌನ್ ರಿಪೋರ್ಟಿನಲ್ಲಿ ಕಾಣಿಸಲ್ಪಡತಕ್ಕವು.

ಜನವರೀ ತಾರೀಖು 30 1877ನೇ ಇಸವಿ ಸರ್ಕ್ಯುಲರ್ ನಂ. 2206—107.

ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರವರಗಳಿಗೆ.

ಗ್ರಾಮಗಳಲ್ಲಾಗಲಿ ಅವುಗಳ ಸಮೀಪವಾಗಲಿ ಕೃತ್ಯಗಳು ನಡಿಯುತ್ತವೆ. ಅವುಗಳ ಸಮಾಚಾರವನ್ನು ಪೊಲೀಸನವರಿಗೆ ತಿಳಿಸುವ ವಿಷಯದಲ್ಲಿ ಈಗ್ಯೂ ಅನೇಕಾವರ್ತಿ ಆಲಸ್ಯ ವುಂಟಾಗುತ್ತದೆ, ಮಿದನ್ನು ಖಂಡಿಸುವದಕ್ಕೂ ಮತ್ತು ಮಾಜಿಸ್ಟ್ರೇಟರಿಗೆ ಪೋಲೀಸನವರಲ್ಲದೆ ಇತರ ಮಾರ್ಗದಿಂದ ಕೃತ್ಯಗಳ ಸಮಾಚಾರಗಳನ್ನು ತಿಳಿಸುವದಕ್ಕೂ ಈ ಕೆಳಗೆ ನಮೂದಿಸುವ ಹುಕುಂಗಳು ತಾಲ್ಲೂಕು ಮತ್ತು ಗ್ರಾಮ ನವುಕರರ ನಡವಳಿಕೆ ಬಗ್ಗೆ ಕೊಡಲ್ಪಟ್ಟು ಯಿರುತ್ತವೆ.

2. ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ ಸೆಕ್ಷರ್ಷ 90ರ ಮೇರೆಗೆ ಗ್ರಾಮಾಧಿಕಾರಿಗಳು ಮುಂತಾದವರು ಪೊಲೀಸನವರಿಗೆ ತಕ್ಷಣವೇ ರಿಪೋರ್ಟು ಮಾಡಬೇಕಾದ ಯೆಲ್ಲಾ ಕೃತ್ಯಗಳು ಸಂಭವಿಸಿದಾಗಲಿ ಸಂಭವಿಸುವದಕ್ಕಿಂತಾ ಮುಂಚೆಯಾಗಲಿ ಸಮೀಪದಲ್ಲಿರುವ ಪೋಲೀಸ್ ಸ್ಟೇಷರ್ಷಗೆ ಮುದ್ದಾಂ ಮುಖಾಂತ್ರ ಜಾಗ್ರತೆಯಾಗಿ ವರ್ತಮಾನವನ್ನು ಕಳುಹಿಸತಕ್ಕದ್ದು, ಮತ್ತು ಅಂತಾ ವರ್ತಮಾನ ತಿಳಿಸುವ ರಿಪೋರ್ಟು ಕಾಲಹರಣವಾಗದಂತೆ ಸಂಕ್ಷೇಪವಾಗಿ ಬರಬೇಕು, ಹ್ಯಾಗಂದರೆ.

——ಫಲಾನೇ ತಾಣೆ ಇನ್‌ಸ್ಪೆಕ್ಟರು, ಯಾ ಜಮೇದಾರ್ರು, ಯಾ ದಫೇದಾರಿಗೆ.

——ಫಲಾನೇ ಗ್ರಾಮದ ಎ, ಬಿ ಯಂಬುವರ ಮನೆಯಲ್ಲಿ—ಫಲಾನೇ ಕೃತ್ಯ ನಡಿಯಿತು, ಲೇಪ್ಯವಾಗಿ ಬರಬೇಕು.

ಹೊತ್ತು ಯಿಲ್ಲದೆ ಮತ್ತು ಬರಿಯುವವನು ಲಿಕ್ಕದೆ ಹೋದ ಪಕ್ಷದಲ್ಲಿ ವರ್ತಮಾನವನ್ನು ಜಾಬಾನಿ ಮೂಲಕ ಸಾಧ್ಯವಾದ ಮಟ್ಟಿಗೂ ಆಜು ಬಾಜು ಠಾಣೆಗಳಿಗೆ ಕಳುಹಿಸಬೇಕು.

139

3. ಮೂರನೆ ದಿವಸ ಪಟೇಲನು ಪದ್ಧತಿ ಪ್ರಕಾರ ತಪಸೀಲ್ ರಿಪೋರ್ಟನ್ನು ಬರದು ತಾಲ್ಲೂಕು ಮಾಜಿಸ್ಟ್ರೇಟರಿಗೆ ಪೋಲೀಸು ನವರ ಮುಖಾಂತ್ರವಲ್ಲದೆ ತಾನೆ ಖುದ್ದು ಕಳುಹಿಸಬೇಕು. ಮತ್ತು ಅದರ ಅಡಿಯಲ್ಲಿ ಪೋಲೀಸುನವರು ಕೃತ್ಯ ನಡದ ಸ್ಥಳಕ್ಕೆ ಬಂದರೆ ಹಾಗಾದರೆ ಯಾವಾಗ ಬಂದರು ಬಂದ ಪೋಲೀಸು ಆಫಿಸರನ ಹೆಸರು ಫಲಾನೇದು, ಈ ಸಂಗತಿಗಳನ್ನೆಲ್ಲಾ ಬರಿಯತಕ್ಕದ್ದು. ಪೋಲೀಸಿನವರು ಬಾರದೆ ಯಿದ್ದಕೆ ಆ ಸಂಗತಿಯೆನ್ನು ಬರದು ಪೋಲೀಸಿನವರನ್ನ ಪುನಶ್ಚ ಕರಿಸಿಕೊಳ್ಳತಕ್ಕದ್ದು.

4. ಡಿಪ್ಯುಟಿ ಕಮ್ಮಿಷನರುಗಳು ಅಮಲ್ದಾರ್ರು ವಗೈರೆರುಗಳಿಗೆ ಬರದು ಈ ಹುಕ್ಕುಂಮನ್ನು ಗ್ಯಾಮೂಧಿಕಾರಿಗಳಿಗೆ ತಿಳಿಸುವದಲ್ಲದೆ ಯಿನ್ನು ಮುಂದೆ ಪೋಲೀಸುನವರಿಗೆ ಕೃತ್ಯ ನಡವ ವಿಷಯದಲ್ಲಿ ತಿಳಿಸುವ ಬಗ್ಗೆ ಆಲಸ್ಯ ಮಾಡಬಾರದೆಂದು ಎಚ್ಚರಿಸುವಂತೆ ತಾಕೀದ್ ಮಾಡತಕ್ಕದ್ದು. ಯಿದುವರಗೂ ಹೇಳಿಕೊಂಡು ಬಂದಂತಾ ನೆವವು ಅಂದರೆ ಪದ್ಧತಿ ಪ್ರಕಾರ ರಿಪೋರ್ಟು ಬರಿಯಬೇಕಾಗಿತ್ತು ಆದ್ದರಿಂದ ಅವಕಾಶ ನಡಿಯಿತು ಯೆನ್ನುವದು ಯಿನ್ನು ಮುಂದೆ ಪಪ್ಪಿಕೊಳ್ಳುವದಿಲ್ಲಾ. ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 90ನೇ ಸೆಕ್ಷನ್ ಅಂಕಗಳು ಖಂಡಿತವಾಗಿ ಜಾರೀಯಲ್ಲಿ ತರಬೇಕು. ಯಿದರಲ್ಲಿಯ ಯಾಗಲಿ ಅಥವಾ ಈಗ ಕೊಟ್ಟ ಹುಕುಂನಲ್ಲಿಯಾಗಲಿ ಯಾವದಾದರು ಸಂಯಾಗಿ ಜಾರೀಯಲ್ಲಿ ತರದೆ ಹೋದರೆ ಅದನ್ನು ಅಮಲ್ದಾರರು ಜಾಹಿರಾತಿಗೆ ತರಬೇಕು.

J. D. GORDON,
Inspector General of Police.

ನಂದೀದುರ್ಗ ಡಿವೀಜ್ಞ.

ತಾರೀಖು 31ನೇ ಜನವರೀ 1877.

ಮಾಗಡಿ ತಾಲ್ಲೂಕು ಸಾಯರ್ ಕಾರ್ಕೂನ ನರಸಪ್ಪನು, ಮೃತಪಟ್ಟ ವೆಂಕಟರಾವುಗೆ ಬದಲಾಗಿ ಐಜ್ಞ ತಾಲ್ಲೂಕು ಮುರಮ್ಮತ್ ಗುಮಾಸ್ತೆಯಾಗಿ ವೊಕರರ್.

ತಾರೀಖು 31ನೇ ಜನವರೀ 1877.

ಗುಡಿಬಂಡೇ ತಾಲ್ಲೂಕು ಕಾಯಂ ಮುರಮ್ಮತ್ ಗುಮಾಸ್ತೆ ಭಾಸ್ಕರಯ್ಯನವರಿಗೆ 8ದಿನಗಳ ಪ್ರಿವಿಲೀಜ್ ರಜಾ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯತು ಮಂಜೂರಾಗಿರುತ್ತೆ.

J. L. PEARSE, *Dy. Commr.*

BANGALORE DISTRICT.
ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ಹೊರತಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಆರಗಿನ ಕಂಟ್ರಾಕ್ಟು 1877—78,—1878—79,—1879—80, 1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೆಲ್ 1ನೇ ಮುಕ್ತಂ ಲಗಾಯತ್ 1882ನೇ ಮಾರ್ಚೀ 31ರ ವರಿಗೆ ಡಿಸ್ಟ್ರಿಕ್ಟು ವಾರಾಗಿ ಜಡೆ ದರಖಾಸ್ತು ದಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚೀ 10ನೇ ಮುಕ್ತಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಜಡೆ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರ್ನಾಟಕೀ ನೋಟುಗಳು ಯಾ ನಗದು ಹಣ ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಶ್ಚ ಹರಾಜ್ ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮುಕ್ತಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮುಕ್ತಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮುಕ್ತಮಿನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟು ಮೊಬಲಗಿಗೆ ನಿಸ್‌ಬತ್ ಯಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.